# ಉಪತಹಶೀಲ್ದಾರರು, ಹಿರೇಹಡಗಲಿ ಇವರ ನ್ಯಾಯಾಲಯದಲ್ಲಿ

| ಅರ್ಜಿದಾರರು | ತಕರಾರುದಾರರು |
|---|---|
| ಹಡಪದ ಗುಡದಯ್ಯ ತಂದೆ ಲೇಟ್ ಪರಮೇಶ್ವರಪ್ಪ ,<br>ಹೊಳಲು ಗ್ರಾಮ, ಹಡಗಲಿ ತಾ. | 1)ಹೂವಕ್ಕ ಗಂಡ ತಿರುಕಪ್ಪ ಕಾಯಕದ ,<br>ಹೊಸರಿತ್ತಿ ಗ್ರಾಮ, ಹಾವೇರಿ ತಾ.<br>2)ಕೆಂಚಮ್ಮ ಗಂಡ ಚಂದ್ರಪ್ಪ ಕಾಯಕದ ,<br>ಗುತ್ತಲ ಗ್ರಾಮ, ಹಾವೇರಿ ತಾ.<br>3)ರತ್ನಮ್ಮ ಗಂಡ ವಿರುಪಾಕ್ಷಪ್ಪ ,<br>ನೀಲಗುಂದ ಗ್ರಾಮ, ಹರಪನಹಳ್ಳಿ ತಾ.<br>4)ರೇಣುಕಮ್ಮ ಗಂಡ ಶಿವಾನಂದಪ್ಪ ಹಡಪದ ,<br>ಕುರುವತ್ತಿ ಗ್ರಾಮ, ಹಡಗಲಿ ತಾ.<br>{ಶ್ರೀ ಎನ್.ಎನ್.ಗಿರಿಯಪ್ಪನವರ, ವಕೀಲರು, ಹಾವೇರಿ (ಕ್ರ.ಸಂ.1 & 2 ರವರ ಪರವಾಗಿ), ಶ್ರೀ ವೆಂಕಟಪ್ಪ, ವಸಂತಕುಮಾರ, ವಕಿಲರು (ಕ್ರ.ಸಂ.3 &4 ರವರ ಪರ)} |

ವಿವಾದಿತ ಜಮೀನಿನ ವಿವರ:

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಪೋತಲಕಟ್ಟೆ | 47 | 1–71 | ಖುಷ್ಕಿ |

**ಪೀಠಿಕೆ:–**

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಬೂದನೂರು ಗ್ರಾಮದ ಮೇಲ್ಕಂಡ ಜಮೀನಿಗೆ ಸಂಬಂಧಿಸಿದಂತೆ, ಹೊಳಲು ಗ್ರಾಮದ ನಿವಾಸಿಯಾದ ಹಡಪದ ಗುಡದಯ್ಯ ತಂದೆ ಲೇಟ್ ಪರಮೇಶ್ವರಪ್ಪ ಇವರು ದಿನಾಂಕ 18–07–2012 ರಂದು ಮಾಡಿಕೊಂಡ ನೋಂದಣಿಯಾಗದ ಪಾಲುವಿಭಾಗ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ದಿನಾಂಕ 05–09–2012 ರಂದು ಅರ್ಜಿ ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ–21 ರ ನೋಟೀಸು ದಿ:13–9–2012 ರಂದು ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿ:17–10–2012 ರಂದು 1)ಹೂವಕ್ಕ ಗಂಡ ತಿರುಕಪ್ಪ ಕಾಯಕದ, ಹೊಸರಿತ್ತಿ ಗ್ರಾಮ, ಹಾವೇರಿ ತಾ., 2)ಕೆಂಚಮ್ಮ ಗಂಡ ಚಂದ್ರಪ್ಪ ಕಾಯಕದ, ಗುತ್ತಲ ಗ್ರಾಮ, ಹಾವೇರಿ ತಾ., 3)ರತ್ನಮ್ಮ ಗಂಡ ವಿರುಪಾಕ್ಷಪ್ಪ, ನೀಲಗುಂದ ಗ್ರಾಮ, ಹರಪನಹಳ್ಳಿ ತಾ. ಮತ್ತು 4)ರೇಣುಕಮ್ಮ ಗಂಡ ಶಿವಾನಂದಪ್ಪ ಹಡಪದ, ಕುರುವತ್ತಿ ಗ್ರಾಮ ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ, ಕಾರಣ ಎಂ.ಆರ್.ಸಂಖ್ಯೆ 5/2012–13 ರ ಕಡತವು ತಕರಾರು ಕಡತವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಹಿರೇಹಡಗಲಿ ರವರು ಈ ಕಾರ್ಯಾಲಯಕ್ಕೆ ವಿಚಾರಣೆಗೆ ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ದಿ:7–3–2013 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಯಿತು.

ಅರ್ಜಿದಾರರು ಮತ್ತು ತಕರಾರುದಾರರು ಸದರಿ ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ತಕರಾರುದಾರರು ತಮ್ಮ ತಕರಾರಿನಲ್ಲಿ ತಿಳಿಸಿದಂತೆ ಹಾಲಿ ಪಟ್ಟದಾರಳಾದ ಅನುಸೂಯಮ್ಮ ಗಂಡ ಬಸಪ್ಪ ಇವರಿಗೆ ಸಂತಾನವಿರುವುದಿಲ್ಲ. ತಕರಾರುದಾರ 3 ಮತ್ತು 4 ರವರ ಪರ ವಕಿಲರು ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿ ಅರ್ಜಿದಾರರಿಗೆ ಹಾಲಿ ಪಟ್ಟದಾರಳೊಂದಿಗೆ ಯಾವುದೇ ಸಂಬಂಧ ಇರುವುದಿಲ್ಲ. ಅರ್ಜಿದಾರನು ಸದರಿ ವಂಶದ ವರಾರಸುದಾರನಲ್ಲ. ಅರ್ಜಿದಾರರೆಲ್ಲರು ಅನುಸೂಯಮ್ಮ ಇವರ ಗಂಡನ ಅಣ್ಣನಾದ ಹಾಲಪ್ಪನ ಮಕ್ಕಳಾಗಿರುತ್ತಾರೆ. ಅರ್ಜಿದಾರರು ವಿಚಾರಣೆ ವೇಳೆ ಯಾವುದೇ ಹೇಳಿಕೆ ಸಲ್ಲಿಸಿರುವುದಿಲ್ಲ. ಅರ್ಜಿದಾರರು ಸಲ್ಲಿಸಿದ ವಂಶವೃಕ್ಷ ಮತ್ತು ತಕರಾರುದಾರರು ಸಲ್ಲಿಸಿದ ವಂಶವೃಕ್ಷ ಭಿನ್ನವಾಗಿದ್ದು, ಅನುಸೂಯಮ್ಮಳಿಗೆ ಸಂತಾನವಿರುವುದಿಲ್ಲ. ಅರ್ಜಿದಾರರ ವಾರಸುದಾರ ವಿಚಾರದ ಬಗ್ಗೆ ತಕರಾರು ಇರುವುದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ಪಹಣಿ/ವಿವಾದ/13/2012–13 ದಿನಾಂಕ:17–10–2016 .

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ರ ಪ್ರಕಾರ ಎಂ.ಆರ್.ಸಂಖ್ಯೆ 5/2012–13 ರ ಪ್ರಕರಣದಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ಆದೇಶಿಸಿದೆ. ಉಭಯರು ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ಸ್ಥಿರಪಡಿಸಿಕೊಂಡು ಪರಿಹರ ಕಂಡುಕೊಳ್ಳಲು ಆದೇಶಿಸಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,
ಹಿರೇಹಡಗಲಿ.

ಪ್ರತಿಯನ್ನು

1. ವಾದಿ ಮತ್ತು ಪ್ರತಿವಾದಿಗಳಿಗೆ
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹೂವಿನಹಡಗಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಕಛೇರಿ ಕಡತಕ್ಕೆ ಶುದ್ಧಪ್ರತಿ.